ಪ್ರಶ್ನೆ

ಅ) ಹುಬ್ಬಳ್ಳಿಯಲ್ಲಿ ಮಂಜೂರಾಗಿದ್ದ ಕೈಮಗ್ಗ ಅಭಿವೃದ್ಧಿ ನಿಗಮದ ನಿರ್ದೇಶನಾಲಯವನ್ನು ಹುಬ್ಬಳ್ಳಿಯಿಂದ ಪುನಃ ಬೆಂಗಳೂರಿಗೆ ಸ್ಥಳಾಂತರಗೊಳಿಸುತ್ತಿರುವ ಸಂಗತಿ ನಿಜವೇ?

ಆ) ಈ ನಿರ್ದೇಶನಾಲಯವನ್ನು ಬೆಂಗಳೂರಿನಿಂದ ಹುಬ್ಬಳ್ಳಿಗೆ ಸ್ಥಳಾಂತರಿಸುವ ಆದೇಶವನ್ನು ಸರ್ಕಾರದವರು ಎಂದು ಹೊರಡಿಸಿದರು, ಸರ್ಕಾರದ ಆಜ್ಞೆ ಅನುಷ್ಠಾನಕ್ಕೆ ಬಂದಿದೆಯೇ ಹಾಗೂ ಎಂದಿನಿಂದ ಈ ಕಛೇರಿ ಕೆಲಸ ನಿರ್ವಹಿಸುತ್ತಿದೆ?

ಇ) ಉತ್ತರ ಕರ್ನಾಟಕ ಅಭಿವೃದ್ಧಿ ಹೊಂದಬಾರದೆಂಬ ಉದ್ದೇಶದಿಂದ ಕೆಲವು ಬೆಂಗಳೂರು ವ್ಯಾಮೋಹಿ ಐ.ಎ.ಎಸ್. ಅಧಿಕಾರಿಗಳು ಅಸೂಯೆ ಮನೋಭಾವನೆಯಿಂದ ಈ ನಿರ್ದೇಶನಾಲಯದ ಕಛೇರಿಯನ್ನು ಹುಬ್ಬಳ್ಳಿಯಿಂದ ಪುನಃ ಸ್ಥಳಾಂತರಗೊಳಿಸಲು ಪ್ರಯತ್ನಿಸುತ್ತಿರುವ ಸಂಗತಿ ನಿಜವೇ?

ಈ) ಹಾಗಿದ್ದಲ್ಲಿ, ಹಿಂದಿನ ಸರ್ಕಾರದವರು ನಿರ್ಣಯಿಸಿದಂತೆ ಕೈಮಗ್ಗ ನಿರ್ದೇಶನಾಲಯವನ್ನು ಹುಬ್ಬಳ್ಳಿಯಲ್ಲಿ ಕೆಲಸ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಉತ್ತರ

ಅ) ನಿಜವಲ್ಲ

ಆ) ಸರ್ಕಾರದ ಆದೇಶ ಸಂಖ್ಯೆ:ಸಿಐ:238:ಸಿಟಿಹೆಚ್:94 ದಿನಾಂಕ:28.10.1996ರನ್ವಯ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ನೋಂದಾಯಿತ ಕಛೇರಿಯನ್ನು ಬೆಂಗಳೂರಿನಿಂದ ಹುಬ್ಬಳ್ಳಿಗೆ ಸ್ಥಳಾಂತರಿಸಲಾಗಿದೆ. ಸರ್ಕಾರದ ಈ ಆಜ್ಞೆ ಅನುಷ್ಠಾನಕ್ಕೆ ಬಂದಿದ್ದು 1997ರ ಏಪ್ರಿಲ್ ತಿಂಗಳಿನಿಂದ ನಿಗಮದ ನೋಂದಾಯಿತ ಕಛೇರಿಯು ಹುಬ್ಬಳ್ಳಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಇ) ನಿಜವಲ್ಲ

ಈ) ಪ್ರಸಕ್ತ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ನೋಂದಾಯಿತ ಕಛೇರಿಯು ಹುಬ್ಬಳ್ಳಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಕಬ್ಬು ಬೆಳೆಗಾರರಿಗೆ ನೀಡಬೇಕಾದ ಹಣ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 409(7)

ಸದಸ್ಯರ ಹೆಸರು : ಶ್ರೀ ಕೃಷ್ಣಮೂರ್ತಿ ಎ.ಆರ್.(ಸಂತೇಮರಳ್ಳಿ)

ಸಚಿವರ ಹೆಸರು ಮತ್ತು ಪದನಾಮ : ಶ್ರೀ ಎ.ಕೃಷ್ಣಪ್ಪ(ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಪ್ರಶ್ನೆ

ಅ) ಕೊಳ್ಳೇಗಾಲ ತಾಲ್ಲೂಕು ಕುಂತನೂರು ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಯು ಕಬ್ಬು ಬೆಳೆಗಾರರಿಗೆ ನೀಡಬೇಕಾದ ಹಣ ಎಷ್ಟು?

ಆ) ಕಬ್ಬು ಬೆಳೆಗಾರರಿಗೆ ನೀಡಬೇಕಾಗಿರುವ ಹಣವನ್ನು ಎಂದಿನಿಂದ ಪಾವತಿಸಲಾಗುವುದು ವಿವರ ನೀಡುವುದು?

ಇ) ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮವೇನು?

ಉತ್ತರ

ಅ, ಆ ಮತ್ತು ಇ) ಮೆ: ಮಹದೇಶ್ವರ ಸಕ್ಕರೆ ಕಾರ್ಖಾನೆ ಕುಂತೂರು, ಕೊಳ್ಳೇಗಾಲ, ಈ ಕಾರ್ಖಾನೆಯು ದಿ:25-5-01ರಂದು ಇದ್ದಂತೆ ರೂ.12.18 ಕೋಟಿ ಕಬ್ಬಿನ ಬಿಲ್ಲನ್ನು ಬಾಕಿ ಇರಿಸಿಕೊಂಡಿತ್ತು. ಈ ಸಮಸ್ಯೆಯ ಪರಿಹಾರಕ್ಕೆ ತೆಗೆದುಕೊಂಡ ಆಡಳಿತಾತ್ಮಕ ಪ್ರಯತ್ನಗಳು ಫಲ ನೀಡಲಿಲ್ಲ. ದಿ:25-5-01ರಂದು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಕಬ್ಬು ನಿಯಂತ್ರಣ ಆದೇಶ 1966ರ ಕಲಂ 3(8)ರಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಮೇಲ್ಕಂಡ ಬಾಕಿ ಮೊತ್ತವನ್ನು ''ಭೂ ಕಂದಾಯ ಬಾಕಿಯಂತೆ'' ವಸೂಲಿ ಮಾಡಿ ರೈತರಿಗೆ ಪಾವತಿಸಲು ಚಾಮರಾಜನಗರ ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಿದರು. ಅದರಂತೆ ಜಿಲ್ಲಾಧಿಕಾರಿಗಳು ಕಾರ್ಖಾನೆಯ ಸಕ್ಕರೆ ಗೋದಾಮುಗಳನ್ನು ಜಪ್ತಿ ಮಾಡುವ ಮುಖಾಂತರ ವಸೂಲಾತಿಗಾಗಿ ಕ್ರಮಗಳನ್ನು ಕೈಗೆತ್ತಿಕೊಂಡರು. ಆದರೆ ಕಾರ್ಖಾನೆಯ ಆಡಳಿತ ಮಂಡಳಿಯು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ದಾಖಲಿಸಿ ತಡೆಯಾಜ್ಞೆಯನ್ನು ಪಡೆದಿರುತ್ತದೆ. ಮಾನ್ಯ ಉಚ್ಚ ನ್ಯಾಯಾಲಯವು ಸಕ್ಕರೆ ದಾಸ್ತಾನನ್ನು ಹಂತ ಹಂತವಾಗಿ ಮಾರಾಟ ಮಾಡಿ ಕಬ್ಬಿನ ಬಾಕಿ, ಇತರೆ ಬಾಕಿ ಮುಂತಾದವುಗಳು ಪಾವತಿ ಮಾಡಲು ಕಾರ್ಖಾನೆಗೆ ಅನುಮತಿ ನೀಡಿರುತ್ತಾರೆ. ಈ ರೀತಿ ಪಾವತಿ ಆಗಿರುವ ಮೊತ್ತವನ್ನು ಕಳೆದು ದಿನಾಂಕ 31-12-01ರಂದು ಇದ್ದಂತೆ ಇನ್ನು ರೂ.8.38 ಕೋಟಿಗಳ ಕಬ್ಬಿನ ಬಿಲ್ಲಿನ ಮೊತ್ತವು ಬಾಕಿ ಇರುತ್ತದೆ. ರಿಟ್ ಅರ್ಜಿಯಲ್ಲಿ ಸರ್ಕಾರಿ ವಕೀಲರ ಮುಖಾಂತರ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.